**ಓ ಎಸ್ ನಂಃ362/2019**
**ಪಿ.ಡಬ್ಲ್ಯೂ -1**
**ದಿನಾಂಕಃ16.08.2023**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್.ಜಿ. ವಕೀಲರಿಂದಃ</u>**

ಪ್ರಸ್ತುತ ದಾವಾ ಸ್ವತ್ತುಗಳ ಮೇಲೆ, ತಿಪ್ಪೇಸ್ವಾಮಿ ಎಂಬುವರು ಓ.ಎಸ್.288/2015 ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ, ಸದರಿ ದಾವೆಯಲ್ಲಿ ನನ್ನ ವಿಚಾರಣೆಯು ಮುಗಿದಿರುತ್ತದೆ ಎಂದರೆ ಸರಿ. 1ನೇದಾವಾ ಸ್ವತ್ತು ನನ್ನ ಸ್ವಾಧೀನದಲಿರುತ್ತದೆ ಎಂದು ದಾವೆ ಹೂಡಿರುತ್ತೇನೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು, ಪ್ರತಿವಾದಿಗಳು ಓಡಾಡುವ ದಾರಿಯನ್ನು ಮುಚ್ಚಿದ್ದರಿಂದ ಹೂಡಿರುತ್ತೇನೆ. ನನ್ನ ಸ್ವತ್ತಿನ ಉತ್ತರ ಭಾಗಕ್ಕೆ ಪ್ರತಿವಾದಿ ಕರಿಯಪ್ಪ ನವರ ಸ್ವತ್ತು ಇದೆ ಎಂದರೆ ಸರಿ. ಅವರ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಪ್ರಸ್ತುತ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

2. ನನ್ನ ಗಂಡ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ ಎಂದರೆ ಸರಿ. ನನ್ನ ಗಂಡ ಗ್ರಾಮ ಲೆಕ್ಕಾಧಿಕಾರಿಯಾಗಿರುವುದರಿಂದ ತಾಲ್ಲೂಕು ಕಛೇರಿಯಲ್ಲಿ ಮತ್ತು ಸರ್ವೆ ಕಛೇರಿಯಲ್ಲಿ ಅವರ ಮಾತು ನಡೆಯುತ್ತದೆ ಎಂದರೆ ಸರಿಯಲ್ಲ. ಹಾಗಾಗಿ ದಾಖಲೆಗಳನ್ನು ಸೃಷ್ಟಿಸಿರುತ್ತೀರಿ ಎಂದರೆ ಸರಿಯಲ್ಲ. ನನ್ನ ದಾವೆ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳೆಲ್ಲವು ಸುಳ್ಳು ಎಂದರೆ ಸರಿಯಲ್ಲ.

3. ಪ್ರಸ್ತುತ ದಾವೆಯನ್ನು ನಾನು 9 ಎಕರೆ 10 ಗುಂಟೆ ಜಮೀನಿನ ಪೈಕಿ 9 ಗುಂಟೆಗಾಗಿ ಹೂಡಿರುತ್ತೇನೆ. ಪೂರ್ವಕ್ಕೆ ತಿಪ್ಪಣ್ಣ, ರಾಜಪ್ಪ, ಪಶ್ಚಿಮಕ್ಕೆ ಃ ಸರ್ಕಾರಿ ಗೋಮಾಳ, ಉತ್ತರಕ್ಕೆಃ ಕರಿಯಪ್ಪ ಬಿನ್ ತಿಪ್ಪಯ್ಯ, ದಕ್ಷಿಣಕ್ಕೆ ಸರ್ಕಾರಿ ಗೋಮಾಳ. ದಾವಾ ಷೆಡ್ಯೂಲ್ ನಲ್ಲಿ ಇರುವ ಚೆಕ್ಕು ಬಂದಿ ಮತ್ತು

**ಓ ಎಸ್ ನಂಃ362/2019**
**ಪಿ.ಡಬ್ಲ್ಯೂ -1**
**ದಿನಾಂಕಃ16.08.2023**

ನಾನು ಹೇಳಿದ ಚೆಕ್ಕುಬಂದಿ ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.